ಕರ್ನಾಟಕ ಸರ್ಕಾರ

ಸಂಖ್ಯೆ:ಸಕಇ 94 ಮೊದೇಶಾ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:12.11.2021.

## ತಿದ್ದುಪಡಿ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಸಕಇ 94 ಮೊದೇಶಾ 2020, ದಿನಾಂಕ:19-06-2021 ರ ಆದೇಶದ **ನಿಬಂಧನೆ / ಷರತ್ತು / ಮಾರ್ಗಸೂಚಿಗಳ ಅಂಶ 9 (ಕೌನ್ಸಿಲಿಂಗ್ ವಿಧಾನ) ಮತ್ತು 10 (ಲಿಂಗ ಹಾಗೂ ಜಾತಿವಾರು ಖಾಲಿ ಉಳಿದ ಸ್ಥಾನಗಳ ಭರ್ತಿ)** ರಲ್ಲಿ ನಮೂದಿಸಿರುವುದನ್ನು ಸಂಪೂರ್ಣವಾಗಿ ಹಿಂಪಡೆಯಲಾಗಿದೆ.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಸಕಇ 94 ಮೊದೇಶಾ 2020, ದಿನಾಂಕ:19-06-2021 ರ ಆದೇಶದ ನಿಬಂಧನೆ / ಷರತ್ತು / ಮಾರ್ಗಸೂಚಿಗಳ ಅಂಶ 9 (ಕೌನ್ಸಿಲಿಂಗ್ ವಿಧಾನ) ಮತ್ತು 10 (ಲಿಂಗ ಹಾಗೂ ಜಾತಿವಾರು ಖಾಲಿ ಉಳಿದ ಸ್ಥಾನಗಳ ಭರ್ತಿ) ರಲ್ಲಿ ನಮೂದಿಸಿರುವುದನ್ನು ಈ ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು.

### 9) ಕೌನ್ಸಿಲಿಂಗ್ ವಿಧಾನ :-

ಪ್ರವೇಶ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳ ಆಧಾರದ ಮೇಲೆ ರಾಜ್ಯ ಮಟ್ಟದ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಿ, ಆನ್‌ಲೈನ್ ಸೀಟು ಹಂಚಿಕೆಗೆ ಈ ಕೆಳಕಂಡ ಅಂಶಗಳನ್ನು ಪರಿಗಣಿಸುವುದು.

- ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳು (ಮೆರಿಟ್),
- ಅಭ್ಯರ್ಥಿಯು ಸೇರ ಬಯಸುವ ವಸತಿ ಶಾಲೆಗಳ ಶಾಲಾವಾರು ಆದ್ಯತೆ
- ಅಭ್ಯರ್ಥಿಗೆ ಸರ್ಕಾರವು ನಿಗದಿಪಡಿಸಿದ ಮೀಸಲಾತಿ

ಮೇಲ್ಕಂಡ ಅಂಶಗಳ ಆಧಾರದ ಮೇಲೆ seat matrix ಸಿದ್ಧಪಡಿಸಿ ಗಣಕೀಕೃತ ಸ್ವಯಂ ಆಯ್ಕೆ (computerized auto selection) ಮೂಲಕ ಪಾರದರ್ಶಕವಾಗಿ ಈ ಕೆಳಕಂಡಂತೆ ಸೀಟು ಹಂಚಿಕೆ ಮಾಡುವುದು.

1. ಅಭ್ಯರ್ಥಿಯು ತಮ್ಮ ಸ್ವಂತ ಜಿಲ್ಲೆಯ ವಸತಿ ಶಾಲೆಗಳಿಗೆ ಮಾತ್ರ ಪ್ರವೇಶ ಪಡೆಯಲು ಅರ್ಹರಿರುತ್ತಾರೆ.
2. ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಯ ತಾವು ಸೇರ ಬಯಸುವ ವಸತಿ ಶಾಲೆಯನ್ನು ಆಯ್ಕೆ ಮಾಡಿಕೊಳ್ಳುವುದು.
3. ಮೆರಿಟ್ ಕಂ ರೋಸ್ಟರ್ ಆಧಾರದ ಮೇಲೆ ವಿದ್ಯಾರ್ಥಿ ಬಯಸುವ ವಸತಿ ಶಾಲೆಯನ್ನು ಕಂಪ್ಯೂಟರೈಸ್ಡ್ ಆಟೋ ಸಲೆಕ್ಷನ್ ಮಾಡುವುದು.
4. ಆಯಾ ಜಿಲ್ಲೆಯ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಿ, ಒಂದು ತಾಲ್ಲೂಕಿನ ವಸತಿ ಶಾಲೆಗಳಿಗೆ ಅದೇ ತಾಲ್ಲೂಕಿನ ಮೂಲ ನಿವಾಸಿಯಾದ ವಿದ್ಯಾರ್ಥಿಗಳಿಗೆ ಶೇ.25% ರಷ್ಟು ಸ್ಥಾನವನ್ನು

ಹಂಚಿಕೆಮಾಡಿ, ಉಳಿದ ಸ್ಥಾನಗಳಿಗೆ ನಿಯಮಾನುಸಾರ ಅದೇ ತಾಲ್ಲೂಕಿನ ಮತ್ತು ಅದೇ ಜಿಲ್ಲೆಯ ಬೇರೆ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಮಾತ್ರ ಸೀಟು ಹಂಚಿಕೆ ಮಾಡುವುದು.

5. ಮೊದಲನೇ ಸುತ್ತಿನಲ್ಲಿ ಹಂಚಿಕೆಯಾಗದೆ ಖಾಲಿ ಉಳಿದ ಸೀಟುಗಳು ಹಾಗೂ ಮೊದಲನೇ ಸುತ್ತಿನಲ್ಲಿ ಹಂಚಿಕೆ ಪಡೆದು ಶಾಲೆಗೆ ದಾಖಲಾಗದೇ ಉಳಿದ ಸೀಟುಗಳನ್ನು ಕ್ರೂಢೀಕರಿಸಿ, ಮೊದಲನೇ ಸುತ್ತಿನಲ್ಲಿ ಭಾಗವಹಿಸಿ ಸೀಟು ಹಂಚಿಕೆಯಾಗದೇ ಇರುವ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಿ 2ನೇ ಸುತ್ತಿನ ಜಿಲ್ಲಾ ಮಟ್ಟದ ಆನ್‌ಲೈನ್ ಸೀಟು ಹಂಚಿಕೆಯನ್ನು ಮಾಡುವುದು. 2ನೇ ಸುತ್ತಿನ ಪ್ರವೇಶ ಪ್ರಕ್ರಿಯೆ ಮುಕ್ತಾಯದ ನಂತರ 3ನೇ ಸುತ್ತಿನ ಕೌನ್ಸಿಲಿಂಗ್ ನಡೆಸಬೇಕು. ಇನ್ನು ಹೆಚ್ಚಿನ ಸುತ್ತಿನ ಕೌನ್ಸಿಲಿಂಗ್ ಅಗತ್ಯವಿದೆ ಎಂಬ ಅಂಶ ಗಮನಕ್ಕೆ ಬಂದರೆ ಕೌನ್ಸಿಲಿಂಗ್ ನಡೆಸುವುದು.
6. ಯಾವುದೇ ವಿಶೇಷ ವರ್ಗದ ಮೀಸಲಾತಿ ಅಡಿಯಲ್ಲಿ ಸ್ಥಾನಗಳು ಖಾಲಿ ಉಳಿದಲ್ಲಿ, ಆಯಾ ಜಿಲ್ಲೆಯ ಅದೇ ವರ್ಗಕ್ಕೆ ಸೇರಿದ ಇತರೆ ವಿಶೇಷ ವರ್ಗದ(ಆಶ್ರಮ ಶಾಲೆ/ ಅಲೆಮಾರಿ-ಅರೆ ಅಲೆಮಾರಿ/ ಅಂಗವಿಕಲ/ ಮಾಜಿ ಸೈನಿಕ/ವಿಶೇಷ ದುರ್ಬಲ ವರ್ಗ/ಸಫಾಯಿ ಕರ್ಮಚಾರಿ) ಅಭ್ಯರ್ಥಿಗಳಿಗೆ, ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸುವುದು. ಅಂದರೆ ಪರಿಶಿಷ್ಟ ಜಾತಿ, ಆಶ್ರಮ ಶಾಲೆ, ಬಾಲಕ ಸ್ಥಾನ ಲಭ್ಯವಿದ್ದಲ್ಲಿ, ಇತರೆ ವಿಶೇಷ ವರ್ಗದ (ಅಲೆಮಾರಿ-ಅರೆ ಅಲೆಮಾರಿ/ ಅಂಗವಿಕಲ/ ಮಾಜಿ ಸೈನಿಕ /ವಿಶೇಷ ದುರ್ಬಲ ವರ್ಗ/ಸಫಾಯಿ ಕರ್ಮಚಾರಿ) ಪರಿಶಿಷ್ಟ ಜಾತಿಯ ಬಾಲಕರಿಗೆ ಅವಕಾಶ ಕಲ್ಪಿಸಬಹುದು.
7. ವಿಶೇಷ ವರ್ಗದ ಮೀಸಲಾತಿ ಅಡಿಯಲ್ಲಿ ಸ್ಥಾನಗಳು ಖಾಲಿ ಉಳಿದಲ್ಲಿ, ವಿಶೇಷ ವರ್ಗದ ಅಭ್ಯರ್ಥಿಗಳು ಲಭ್ಯವಿಲ್ಲದಲ್ಲಿ ಆಯಾ ವರ್ಗದ ಅಭ್ಯರ್ಥಿಗೆ ಅವಕಾಶ ಕಲ್ಪಿಸಬಹುದಾಗಿರುತ್ತದೆ. ಅಂದರೆ ಪ.ಜಾ/ಪ.ವ/ಹಿಂ.ವ ಗಳ ವಿಶೇಷ ವರ್ಗಕ್ಕೆ ಮೀಸಲಾದ ಸ್ಥಾನಗಳು ಖಾಲಿ ಉಳಿದಲ್ಲಿ ಕ್ರಮವಾಗಿ ಪ.ಜಾ/ಪ.ವ/ಹಿಂ.ವ ಗಳ ಅವಕಾಶ ಕಲ್ಪಿಸಬಹುದು.

## 10. ಲಿಂಗ ಹಾಗೂ ಜಾತಿವಾರು ಖಾಲಿ ಉಳಿದ ಸ್ಥಾನಗಳ ಭರ್ತಿ :-

1. ಬಾಲಕ ಸ್ಥಾನ ಖಾಲಿ ಉಳಿದರೆ, ಅದೇ ವರ್ಗದ ಬಾಲಕಿಯರಿಗೆ ಅವಕಾಶ ಕಲ್ಪಿಸುವುದು.
2. ಬಾಲಕಿ ಸ್ಥಾನ ಖಾಲಿ ಉಳಿದರೆ, ಅದೇ ವರ್ಗದ ಬಾಲಕರಿಗೆ ಅವಕಾಶ ಕಲ್ಪಿಸುವುದು.
3. ಪರಿಶಿಷ್ಟ ಜಾತಿಗೆ ಮೀಸಲಾದ ಸ್ಥಾನ ಖಾಲಿ ಉಳಿದರೆ ಕ್ರಮವಾಗಿ ಪರಿಶಿಷ್ಟ ವರ್ಗ, ಪ.ವರ್ಗ-1, 2ಎ, 2ಬಿ, 3ಎ, 3ಬಿ ಅಭ್ಯರ್ಥಿಗೆ ಅವಕಾಶ ಕಲ್ಪಿಸುವುದು.
4. ಪರಿಶಿಷ್ಟವರ್ಗದ ಸ್ಥಾನ ಖಾಲಿ ಉಳಿದರೆ ಕ್ರಮವಾಗಿ ಪರಿಶಿಷ್ಟ ಜಾತಿ, ಪ.ವರ್ಗ-1, 2ಎ, 2ಬಿ, 3ಎ, 3ಬಿ ಅಭ್ಯರ್ಥಿಗೆ ಕ್ರಮವಾಗಿ ಅವಕಾಶ ಕಲ್ಪಿಸುವುದು.
5. ಪ.ವರ್ಗ-1ರಲ್ಲಿ ಖಾಲಿ ಉಳಿದರೆ 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ, ಪ.ವರ್ಗದ ಅಭ್ಯರ್ಥಿಗೆ ಕ್ರಮವಾಗಿ ಅವಕಾಶ ಕಲ್ಪಿಸುವುದು.
6. 2ಎ ವರ್ಗದಲ್ಲಿ ಖಾಲಿ ಉಳಿದರೆ ಕ್ರಮವಾಗಿ ಪ.ವರ್ಗ-1, 2ಬಿ, 3ಎ, 3ಬಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗೆ ಅವಕಾಶ ಕಲ್ಪಿಸುವುದು.
7. ಪ.ವರ್ಗ, 2ಬಿ ಯಲ್ಲಿ ಖಾಲಿ ಉಳಿದರೆ, ಪ.ವರ್ಗ-1, 2ಎ. 2ಬಿ, 3ಬಿ, ಪರಿಶಿಷ್ಟ ಜಾತಿ, ಪ.ವರ್ಗದ ಅಭ್ಯರ್ಥಿಗೆ ಅವಕಾಶ ಕಲ್ಪಿಸುವುದು.
8. 3ಎ ಯಲ್ಲಿ ಖಾಲಿ ಉಳಿದರೆ, ಕ್ರಮವಾಗಿ ಪ.ವರ್ಗ-1, 2ಎ. 2ಬಿ, 3ಬಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗೆ ಅವಕಾಶ ಕಲ್ಪಿಸುವುದು.

9. 3ಬಿ ಯಲ್ಲಿ ಖಾಲಿ ಉಳಿದರೆ, ಪ.ವರ್ಗ-1, 2ಎ, 2ಬಿ, 3ಎ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗೆ ಕ್ರಮವಾಗಿ ಅವಕಾಶ ಕಲ್ಪಿಸುವುದು.

ಮೇಲ್ಕಂಡಂತೆ ಕ್ರಮವಹಿಸಿದ ತರುವಾಯವೂ, ಸೀಟುಗಳು ಖಾಲಿ ಉಳಿದಲ್ಲಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ಮಾತ್ರ ಆಯ್ಕೆಗೆ ಪರಿಗಣಿಸಿ ಮೀಸಲಾತಿ, ಮೆರಿಟ್ ಹಾಗೂ ಶಾಲಾವಾರು ಆದ್ಯತೆ ಆಧಾರದ ಮೇಲೆ ಸೀಟು ಹಂಚಿಕೆ ಮಾಡಲು ಆಯಾ ಜಿಲ್ಲಾ ಜಂಟಿ/ ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಇವರು ಕ್ರಮವಹಿಸುವುದು. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಲಭ್ಯವಿಲ್ಲದಲ್ಲಿ, ಸೀಟುಗಳು ಖಾಲಿ ಉಳಿದರೆ, ಸ್ಥಳೀಯವಾಗಿ ಅರ್ಜಿ ಆಹ್ವಾನಿಸಿ ಪ್ರವೇಶ ಅವಕಾಶ ಕಲ್ಪಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

12/11/2021
(ಪಿ.ಎನ್.ನಾಗರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, (ಲೆಕ್ಕಪತ್ರ/ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು.
5. ಎಲ್ಲಾ ಜಿಲ್ಲಾಧಿಕಾರಿಗಳು.
6. ಎಲ್ಲಾ ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್.
7. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
8. ಎಲ್ಲಾ ಜಿಲ್ಲೆಗಳ ಉಪ / ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ.
9. ಎಲ್ಲಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.
10. ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿಗಳು

**ಪ್ರತಿ ಮಾಹಿತಿಗಾಗಿ:-**

1. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸಸೌಧ.
4. ಸರ್ಕಾರದ ಉಪ ಕಾರ್ಯದರ್ಶಿ-1 ಮತ್ತು 2, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕ, ವಿಕಾಸಸೌಧ.

***